**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10006-2023**

ಪಿಡಬ್ಲ್ಯೂ- 3

ಸಿಡಬ್ಲ್ಯೂ- 3

ಸಾಕ್ಷಿ ಹೆಸರು - ಮಂಜುಳಾ

ಗಂಡನ ಹೆಸರು - ಲೋಕೇಶ

ವಯಸ್ಸು - 55 ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸಃ - ಯಲಸಿ ಗ್ರಾಮ, ಸೊರಬ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ 01-07-2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ1 ನನ್ನ ಮಗ. ಚಾಸಾ2 ನನ್ನ ಗಂಡ. ಚಾಸಾ4 ನನ್ನ ಮಗ. ಚಾಸಾ6 ನನ್ನ ಮೈದುನ. ಚಾಸಾ 5 ಕನ್ನಪ್ಪ ನಮ್ಮ ಪಕ್ಕದ ಮನೆಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಅವರು ನಮ್ಮ ಪಕ್ಕದ ಮನೆಯವರು. ನಮಗೂ ಮತ್ತು ಆರೋಪಿತರಿಗೂ ಜಾಗದ ವಿಚಾರವಾಗಿ ತಕರಾರು ಇರುತ್ತದೆ.

ಸುಮಾರು 3 ವರ್ಷಗಳ ಹಿಂದೆ ಸಂಜೆ 5-00 ಗಂಟೆ ಸಮಯದಲ್ಲಿ ನಮ್ಮ ಮನೆಯ ಹಿಂಭಾಗದಲ್ಲಿರುವ ಜಾಗದಲ್ಲಿ ಸಗಣಿ ಸಾರಿಸುತ್ತಿದ್ದೆ. ಆಗ ಛತ್ರಪತಿಯ ಮಗ ಅರುಣ ಅಲ್ಲಿಗೆ ಬಂದು ನನಗೆ ಸೂಳೆ ಮುಂಡೆ, ಹಾದರಗಿತ್ತಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದ. ಆಗ ಸ್ಥಳಕ್ಕೆ ಚಾಸಾ1 ನನ್ನ ಮಗ ಬಂದು, 1 ನೇ ಆರೋಪಿ ಅರುಣನಿಗೆ

ಏಕೆ ನನ್ನ ತಾಯಿಯನ್ನು ಬೈಯ್ಯುತ್ತಿದ್ದೀಯಾ ಎಂದು ಕೇಳಿದ. ಆಗ 1 ನೇ ಆರೋಪಿ ನನ್ನ ಮಗನಿಗೆ ನೀನು ಯಾರೋ ಕೇಳುವುದಕ್ಕೆ ಬೋಳಿ ಮಗನೇ, ಸೂಳೆ ಮಗನೆ ಎಂದು ಬೈದ. ನಂತರ 1 ನೇ ಆರೋಪಿ ನನ್ನ ಮಗ ಚಾಸಾ1 ರವರನ್ನು ನೂಕಿರುತ್ತಾನೆ. ಆ ಸಂದರ್ಭದಲ್ಲಿ ನನ್ನ ಗಂಡ ಚಾಸಾ2 ರವರು ಸ್ಥಳಕ್ಕೆ ಬಂದರು. ಆಗ 2 ನೇ ಆರೋಪಿ ಚಾಸಾ2 ರವರಿಗೆ ಕೋಲಿನಲ್ಲಿ ಹೊಡೆದಿರಬಹುದು. 1 ನೇ ಆರೋಪಿ ಕಂದ್ಲಿಯನ್ನು ತೆಗೆದುಕೊಂಡು ನನ್ನ ಮಗ ಚಾಸಾ1 ರವರ ತಲೆಯ ಎಡಭಾಗಕ್ಕೆ ಹೊಡೆದ. ತಲೆ ಸೀಳಿ ಹೋಗಿ ರಕ್ತ ಬಹಳ ಬಂತು. ಆಗ ನಮ್ಮ ಮನೆಯವರು ಚಾಸಾ2 ಚಾಸಾ1 ರವರನ್ನು ಬಿಡಿಸಲು ಹೋದರು. ಆಗ 1 ನೇ ಆರೋಪಿ ನನ್ನ ಗಂಡ ಚಾಸಾ2 ರವರಿಗೆ ಕಂದ್ಲಿಯಿಂದ ಎಡ ಭುಜಕ್ಕೆ ಮತ್ತು ಎಡಕಿವಿಗೆ ಹೊಡೆದ. ಆಗ ಅವರಿಗೆ ಗಾಯ ಆಗಿ ರಕ್ತ ಬಂದಿರುತ್ತದೆ.

ಆ ಸಮಯದಲ್ಲಿ ಕನ್ನಪ್ಪ, ಪರಮೇಶ ಮತ್ತು ನನ್ನ ಚಿಕ್ಕ ಮಗ ಶ್ರೀಧರ ಸ್ಥಳಕ್ಕೆ ಬಂದು ಜಗಳ ಬಿಡಿಸಿರುತ್ತಾರೆ. ಆರೋಪಿತರು ನಿಮ್ಮನ್ನು ಬಿಡುವುದಿಲ್ಲ, ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. 1 ನೇ ಆರೋಪಿ ಕಂದ್ಲಿಯನ್ನು ಅಲ್ಲೇ ಬಿಸಾಡಿದ. ಆರೋಪಿತರು ನನ್ನ ಮಗ ಚಾಸಾ1 ಮತ್ತು ನನ್ನ ಗಂಡ ಚಾಸಾ2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕಂದ್ಲಿಯಿಂದ ಹಲ್ಲೆ ಮಾಡಿರುತ್ತಾರೆ.

ನಂತರ ಕನ್ನಪ್ಪ, ನನ್ನ ಮಗ ಶ್ರೀಧರ, ಪರಮೇಶರವರು ಚಾಸಾ1 ಮತ್ತು ಚಾಸಾ2 ರವರನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಘಟನಾ ಸಮಯದಲ್ಲಿ ಚಾಸಾ1 ರವರು ಒಂದು ಟೋಪಿ ಮತ್ತು ಒಂದು ಬಿಳಿ ನೀಲಿ ಬಣ್ಣದ ಶರ್ಟ್ ಅನ್ನು ಧರಿಸಿದ್ದರು. ನನ್ನ ಗಂಡ ಚಾಸಾ2 ರವರು ಅರ್ಧ ತೋಳಿನ ಶರ್ಟ್ ಧರಿಸಿದ್ದರು. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಟೋಪಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ಚಾಸಾ1 ಮತ್ತು ಚಾಸಾ2 ರವರು

ಧರಿಸಿದ್ದ ಬಟ್ಟೆಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು ಮಾ 2 ಮತ್ತು ಮು ಮಾ 3 ಎಂದು ಗುರುತಿಸಲಾಗಿದೆ. 1 ನೇ ಆರೋಪಿ ಚಾಸಾ1 ಮತ್ತು ಚಾಸಾ2 ರವರಿಗೆ ಹಲ್ಲೆ ಮಾಡಲು ಬಳಸಿದ್ದ ಕಂದ್ಲಿಯನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 4 ಎಂದು ಗುರುತಿಸಲಾಗಿದೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿತರು ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಗಲಾಟೆಯಾದ ಮಾರನೇ ದಿವಸ ಪೋಲೀಸರು ಘಟನೆ ನಡೆದ ಸ್ಥಳದಹತ್ತಿರ ಬಂದಿದ್ದರು. ಆ ಸಂದರ್ಭದಲ್ಲಿ ಪೋಲೀಸರು ನನ್ನನ್ನು ವಿಚಾರಿಸಿದರು. ನಾನು ಅವರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ**

ಪೋಲೀಸರು ಸ್ಥಳಕ್ಕೆ ಬಂದಿದ್ದಾಗ ಕಂಪ್ಯೂಟರ್ ಮತ್ತು ಪ್ರಿಂಟರ್ ನ್ನು ತಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳಿದ ರೀತಿ ಪೋಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ 4 ಕಂದ್ಲಿಯನ್ನು ನನ್ನ ಯಜಮಾನವರು ಚಾಸಾ2 ರವರು ತೆಗೆದು ಇಟ್ಟುಕೊಂಡಿದ್ದರು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಯಾವುದೇ ಘಟನೆ ನಡೆದಿರುವುದಿಲ್ಲ, ನಮ್ಮ ಮತ್ತು ಆರೋಪಿತರ ನಡುವೆ ಜಾಗದ ವಿಚಾರದಲ್ಲಿ ತಕರಾರು ಇರುವುದರಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಇರುವ ಮು ಮಾ 2 ಶರ್ಟ್ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ. ಅವರು ಬರೆದುಕೊಂಡಿದ್ದನ್ನು ನಾನು ನೋಡಿರುವುದಿಲ್ಲ. ನಮ್ಮ ಕೇರಿಯಲ್ಲಿ ಸುಮಾರು 80 ಮನೆ ಇರುತ್ತವೆ. ಎಲ್ಲರ ಮನೆಯ ಹಿಂಭಾಗದಲ್ಲಿ ಹಿತ್ತಲು ಇರುತ್ತದೆ ಎಂದರೆ ಸರಿ. ಮುಂಭಾಗದಲ್ಲಿ ರಸ್ತೆ ಇರುತ್ತದೆ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಆ ದಿವಸ ನನಗೆ 1 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಲಾದ ಸಂದರ್ಭದಲ್ಲಿ 2 ನೇ ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ 1 ನೇ ಆರೋಪಿ ಕಂದ್ಲಿಯಿಂದ ಚಾಸಾ1 ಮತ್ತು 2 ರವರಿಗೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿ ಚಾಸಾ1 ಮತ್ತು ಚಾಸಾ2 ರವರಿಗೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).